## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 46/2018 ಸಿ.ಡಬ್ಲ್ಯೂ –5 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಅಣವೀರಪ್ಪ |
| ತಂದೆಃ ಗಂಡ | ಃ | ಮಲ್ಲಿಗನಾಥ |
| ವಯಸ್ಸು | ಃ | ೩೬ ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | ಃ | ಧರ್ಮವಾಡಿ |

ದಿನಾಂಕಃ೧೭.೦೭.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1, 4 ರವರ ಪರಿಚಯ ಇರುತ್ತದೆ, ಚಾಸಾ-2, 3, 6 ರವರ ಪರಿಚಯ ಇರುವುದಿಲ್ಲ.

ಪಿತ್ತಲಶಿರೂರ ಗ್ರಾಮದಲ್ಲಿ ಸಂಜೆ 7-8 ಸುಮಾರಿಗೆ ಘಟನೆ ಆಗಿರುತ್ತದೆ. ಜೆ.ಸಿ.ಬಿ.ಯಿಂದ ಕೆಲಸ ಮಾಡುತ್ತಿರುವಾಗ ಬಂದು ತರುಬಿ ಸೈಡಿಗೆ ಹಾಕು ಎಂದು ಹೇಳಿದಾಗ ಹಾಕಿರುತ್ತೇವೆ. ಆಗ ಕಲ್ಲು ತೆಗೆದುಕೊಂಡು ಜೆ.ಸಿ.ಬಿ. ಗ್ಲಾಸಿಗೆ ಒಗೆದಿರುತ್ತಾರೆ. ಆಗ ನಾವು ಸ್ಥಳದಿಂದ ಬಂದಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ**

ದಿ.19.07.2017 ರಂದು ಗುತ್ತಿಗೆದಾರರಾದ ರಾಜಶೇಖರ ತಂದೆ ಯಲ್ಲಪ್ಪ ಯಂಕಂಚಿ ಇವರು ನನಗೆ ರಸ್ತೆ ಕಾಮಗಾರಿ ಕೆಲಸವನ್ನು ಕೊಟ್ಟಿದ್ದರು ಎಂದರೆ ಸರಿ. ನನ್ನ ಜೆ.ಸಿ.ವಿ. ವಾಹನ ನಂ. ಕೆ.ಎ-32-ಸಿ-3835 ಎಂದರೆ ಸರಿ. ಚಾಸಾ-೧ ನನ್ನ ಜೆ.ಸಿ.ಬಿ. ವಾಹನದ ಚಾಲಕ ಎಂದರೆ ಸರಿ, ಅವನು ಪಿತ್ತಲಶಿರೂರ ಗ್ರಾಮದಿಂದ ಬೆಣ್ಣೆಶಿರೂರ ಗ್ರಾಮಕ್ಕೆ ಹೋಗುವ ರಸ್ತೆಯ ಕೆಲಸ ಮಾಡುತ್ತಿದ್ದನು ಎಂದರೆ ಸರಿ. ಆರೋಪಿತರು ಸದರಿ ಕಾಮಗಾರಿಯ ಕೆಲಸವನ್ನು ಮಾಡಬೇಡ ಎಂದು ಹೇಳಿ ಬಂದ್ ಮಾಡಿದರು ಎಂದರೆ ಸರಿ. ಆರೋಪಿತರು ಜೆ.ಸಿ.ಬಿ. ಗ್ಲಾಸಿನ ಮುಂದಿನ ಗ್ಲಾಸಿಗೆ ಕಲ್ಲು ಹೊಡೆದರು ಎಂದರೆ ಸರಿ. ಸದರಿ ಗ್ಲಾಸ್ ಒಡೆದಿದ್ದರಿಂದ ನನಗೆ ರೂ.15000/- ನಷ್ಟ ಆಗಿರುತ್ತದೆ ಎಂದರೆ ಸರಿ. ನಾನು ಪೋಲಿಸರಿಗೆ ಆರೋಪಿತರ ವಿರುದ್ದ ಕಾನೂನು ಕ್ರಮ ಜರುಗಿಸಿ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರ** ಶ್ರೀ ಬಿ.ಎಸ್.ಎನ್. **ವಕೀಲರಿಂದ**

ನಾನೇ ಸದರಿ ಜೆ.ಸಿ.ಬಿಯ ಮಾಲಿಕನೆಂದು ತೋರಿಸಲು ಪೊಲಿಸರಿಗೆ ದಾಖಲೆಗಳನ್ನು ಕೊಟ್ಟಿದ್ದೇನೆಯೋ ಇಲ್ಲವೋ ನನಗೆ ಅಷ್ಟು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೋಲಿಸರಿಗೆ ನಾನು ಜೆ.ಸಿ.ಬಿ. ದಾಖಲೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ಪೋಲಿಸರು ನನಗೆ ಕೇಳಿರುವುದಿಲ್ಲ ಎಂಧರೆ ಸರಿ. ಚಾಸಾ-೬ ಗುತ್ತಿಗೆದಾರರು ಎಂಧರೆ ಸರಿ. ನನ್ನ ಜೆ.ಸಿ.ಬಿಯನ್ನು ಚಾಸಾ-೬ ರವರು ತಾಸಿನ ಲೆಕ್ಕದ ಮೇಲೆ ಎಂಗೇಜ್ ಪಡೆದಿದ್ದರು. ರಸ್ತೆ ಕಾಮಗಾರಿ ನಡೆದಿತ್ತು ಎಂದು ಹೇಳುತ್ತೀರಲ್ಲ, ಅದು ಯಾವ ಫಂಡಿನಲ್ಲಿ ನಡೆದಿತ್ತು ಎಂದರೆ ಸಾಕ್ಷಿ ಎಂ.ಎಲ್.ಎ. ಫಂಡಿನಲ್ಲಿ ನಡೆದಿತ್ತು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಆಳಂದ ತಾಲೂಕಿನ ಎಂ.ಎಲ್.ಎ. ಬಿ.ಆರ್. ಪಾಟೀಲ ಇದ್ದರು ಎಂದರೆ ಸರಿ. ಚಾಸಾ-೬ ಮತ್ತು ಆರೋಪಿ ನಂ.೧ ರವರು ಬಿ.ಆರ್. ಪಾಟೀಲರವರ ಫಾಲೋವರ್ಸ ಇರುತ್ತಾರೆ ಎಂದರೆ ಸರಿ, ಆರೋಪಿ ನಂ.೧ ರವರು ಸಹ ಕೂಡ ಗುತ್ತಿಗೆದಾರ ಇರುತ್ತಾರೆ ಎಂಧರೆ ಸರಿ. ಬಿ.ಆರ್. ಪಾಟೀಲ್ ಎಂ.ಎಲ್.ಎ ರವರು ಆರೋಪಿ ನಂ.೧ ರವೆರಿಗೆ ಸದರಿ ಕೆಲಸ ವನ್ನು ನೀಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನಾ ಸಮಯದಲ್ಲಿ ನಾನು ಇರಲಿಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ಯಾರು ಬಂದರು, ಯಾರು ಕಲ್ಲು ಹೊಡೆದರು ಎಂದು ನಾನು ನೋಡಿರುವುದಿಲ್ಲ ಎಂದರೆ ಸರಿ.

ಯಾವ ಜಮೀನಿನ ಸ.ನಂ.ನಲ್ಲಿ ನನ್ನ ಜೆ.ಸಿ.ಬಿ ಕೆಲಸ ಮಾಡುತ್ತಿತ್ತು ಎಂದು ನನಗೆ ಹೇಳಲು ಬರುವುದಿಲ್ಲ, ಯಾರ ಹೊಲದ ಪಕ್ಕದಲ್ಲಿತ್ತು, ಯಾರು ಮಾಲೀಕರು ಎಂದು ನನಗೆ ಹೇಳಲು ಬರುವುದಿಲ್ಲ ಎಂಧರೆ ಸರಿ. ನನ್ನ ಜೆ.ಸಿ.ಬಿ. ಗ್ಲಾಸ ಒಡೆದ ಭಾವಚಿತ್ರವನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ ಪೋಲಿಸರೇ ಮೊಬೈಲನಲ್ಲಿ ತೆಗೆದುಕೊಂಡಿರುತ್ತಾರೆ. ಚಾಸಾ-೬ ಮತ್ತು ನನ್ನ ಸಂಬಂಧ ಚೆನ್ನಾಗಿರುತ್ತದೆ ಎಂಧರೆ ಸರಿ. ಚಾಸಾ-೬ ಮತ್ತು ಆರೋಪಿ ನಂ.೧ ರವರ ನಡುವೆ ಸದರಿ ಹಿತ್ತಲಶಿರೂರರಿಂದ ಬೆಣ್ಣೆಶಿರೂರ ಗ್ರಾಮಕ್ಕೆ ಹೋಗುವ ರಸ್ತೆಯ ಕಾಮಗಾರಿ ಸಲುವಾಗಿ ಅವರವರ ನಡುವೆ ತಕರಾರು ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ-೬ರವರ ಮತ್ತು ನನ್ನ ಸಂಬಂಧ ಚೆನ್ನಾಗಿರುವ ಕಾರಣ ಚಾಸಾ-೬ ರವರು ಹೇಳಿದ ಮೇರೆಗೆ ನಾನು ನನ್ನ ಚಾಲಕ ಚಾಸಾ-೧ ರವರ ಮೂಲಕ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಯಾವುದೇ ಘಟನೆ ನಡೆಯದಿದ್ದರೂ ನಡೆದಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಯಾವತ್ತಿಗೂ ನನ್ನ ಜೆ.ಸಿ.ಬಿ ಕಲ್ಲನ್ನು ಎಸೆದು ಗ್ಲಾಸನ್ನು ಒಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೬ ರವರ ಮಾತನ್ನು ಕೇಳಿಕೊಂಡು ಚಾಸಾ-೧ ರವರ ಮೂಲಕ ಸುಳ್ಳು ಫಿರ್ಯಾದಿ ಕೊಡಿಸಿ ಅದಕ್ಕೆ ಪೂರಕವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಚಾಸಾ-೧ ಹೇಳಿಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ಮರುವಿಚಾರಣೆ: ಇರುವುದಿಲ್ಲ

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ